# ಮೆಸೇಜುಗಳಿವೆ ಎಚ್ಚರಿಕೆ!




**ಮೊಬೈಲ್ ಇದೆ ಎಂದ ಮೇಲೆ ಮೆಸೇಜ್‌ಗಳು ಬಂದೇ ಬರುತ್ತವೆ. ಯಾವನೂ ನಿಮ್ಮನ್ನು ಕೇಳಿ ನಿಮ್ಮ ನಂಬರಿಗೆ ಮೆಸೇಜ್ ಕಳುಹಿಸುವುದಿಲ್ಲ. ಕಳುಹಿಸುವುದು ಅವನಿಷ್ಟ. ಆದರೆ ಅವುಗಳನ್ನು ಓದಿದ ಬಳಿಕ ನಿಮ್ಮ ಗತಿ ಏನಾಗಬೇಕು?**

**■ ಉದಯರವಿ ಶಾಸ್ತ್ರೀ**

\# ಮೆಸೇಜ್ 1

ನೀವು ಚಿತ್ರಮಂದಿರಕ್ಕೆ ಮತ್ತೆ ಹೋದಾಗ ಎಚ್ಚರಿಕೆಯಿಂದಿರಿ. ನನ್ನ ಗೆಳೆಯನೊಬ್ಬನ ಫ್ರೆಂಡ್‌ಗೆ ಆದ ಈ ಅನುಭವ ತಿಳಿದರೆ ಎದೆ ನಡುಗುತ್ತದೆ. ಬೆಂಗಳೂರಿನ ಚಿತ್ರಮಂದಿರವೊಂದಕ್ಕೆ ಆತ ತನ್ನ ಗೆಳೆಯರೊಡನೆ ಹೋಗಿ ಕೂತಾಗ ಸೀಟಿನಲ್ಲಿ ಏನೋ ಚುಚ್ಚಿದಂತಾಯಿತು. ಏನೆಂದು ಎದ್ದು ನೋಡಿದರೆ ಅವನಿಗೆ ಚುಚ್ಚಿದ್ದು ಕೆಂಪು ದ್ರವವಿದ್ದ ಒಂದು ಸಿರಿಂಜ್. ಅದಕ್ಕೆ ಕಟ್ಟಿದ್ದ ಒಂದು ಸಣ್ಣ ಕಾಗದದ ಮೇಲೆ 'ಏಡ್ಸ್ ಪ್ರಪಂಚಕ್ಕೆ ಸ್ವಾಗತ' ಎಂದು ಬರೆದಿತ್ತು. ಇದು ತನ್ನ ಗೆಳೆಯರದೇ ಕೀಟಲೆ ಎಂದುಕೊಂಡ. ಆದರೆ ಇದು ಅವರು ಯಾರೂ ಮಾಡಿದ್ದು ಅಲ್ಲ ಎಂದು ತಿಳಿದಾಗ ಪರಿಸ್ಥಿತಿಯ ಗಾಂಭೀರ್ಯತೆ ಅರಿವಾಯಿತು. ಮರುದಿನ ಹೋಗಿ ರಕ್ತ ಪರೀಕ್ಷೆ ಮಾಡಿಸಿಕೊಂಡರೆ ಅವನಿಗೆ ಎಚ್ ಐ.ವಿ. ಸೋಂಕು ತಗುಲಿರುವುದು ಸಾಬೀತಾಯಿತು. ಗೆಳೆಯರೆ, ಯಾರೊ ಏಡ್ಸ್ ರೋಗಿ ಸೋಂಕುಗೊಂಡ ತನ್ನ ರಕ್ತದಿಂದ ಎಲ್ಲರಿಗೂ ಇದನ್ನು ಹಬ್ಬಿಸುತ್ತಿದ್ದಾನೆ. ಈ ಮೆಸೇಜನ್ನು ನಿಮಗೆ ಕಾಳಜಿ ಇರುವ ಎಲ್ಲರಿಗೂ ತಿಳಿಸಿ. ಎಚ್ಚರಿಕೆಯಿಂದಿರಿ.

\# ಮೆಸೇಜ್ 2

ಇದು ದೆಹಲಿ ಪೋಲೀಸಿನಿಂದ ಬಂದ ಮುಖ್ಯ ಮಾಹಿತಿ. ಇನ್ನು ಮುಂದೆ ಕೆಲವು ದಿನಗಳು ದಯವಿಟ್ಟು ಪೆಪ್ಸಿ ಕಂಪೆನಿಯ ಪೇಯಗಳಾದ ಪೆಪ್ಸಿ, ಟ್ರಾಪಿಕಾನ, ೭ ಅಪ್, ಸ್ಲೈಸ್ ಇವುಗಳನ್ನು ಕುಡಿಯಬೇಡಿ. ಆ ಕಂಪನಿಯಲ್ಲಿ ಕೆಲಸ ಮಾಡುವ ನೌಕರನೊಬ್ಬ ಏಡ್ಸ್ ಸೋಂಕಿನಿಂದ ಬಳಲುತ್ತಿದ್ದು, ಆತ ಸಮಾಜದ ಮೇಲೆ ಸೇಡು ತೀರಿಸಿಕೊಳ್ಳಲು ತನ್ನ ವ್ಯಾಧಿಗ್ರಸ್ಥ ರಕ್ತವನ್ನು ಈ ಪೇಯಗಳಿಗೆ ಬೆರೆಸಿದ್ದಾನೆ. ಹೆಚ್ಚಿನ ಮಾಹಿತಿಗೆ ಎನ್.ಡಿ.ಟಿವಿ. ವಾರ್ತೆ ನೋಡಿ. ದಯವಿಟ್ಟು ಎಲ್ಲರಿಗೂ ಎಚ್ಚರಿಕೆ ತಿಳಿಸಿ.

\# ಮೆಸೇಜ್ 3

ಈ ರಹಸ್ಯ ನಿಮಗೆ ಗೊತ್ತಿರಲಿ. ಇದು ನಿಮ್ಮ ಹಣವನ್ನೂ, ಪ್ರಾಣವನ್ನೂ ಕಾಪಾಡಬಹುದು. ನನ್ನ ಫ್ರೆಂಡ್ ಒಬ್ಬನ ಗೆಳೆಯ ರಾತ್ರಿ ಕೆಲಸದಿಂದ ಹಿಂತಿರುಗುತ್ತಿರುವಾಗ ದಾರಿಯಲ್ಲಿ ಇಬ್ಬರು ರೌಡಿಗಳು ಅವನನ್ನು ಹತ್ತಿರದ ಎ.ಟಿ.ಎಂ.ಗೆ ಎಳೆದುಕೊಂಡು ಹೋಗಿ ಹಣ ಡ್ರಾ ಮಾಡಲು ಒತ್ತಾಯಿಸಿದರು. ಅವನು ಏನೂ ಹೆದರದೆ ಕಾರ್ಡ್ ಯಂತ್ರದಲ್ಲಿ ಹಾಕಿದ. ಪಿನ್ ಸಂಖ್ಯೆ ಒತ್ತುವಾಗ ಏನೋ ಚಮತ್ಕಾರ ಮಾಡಿದ. ಆದರಿಂದ ಹಣವೇನೋ ಬಂತು. ಆದರೆ ಅದು ಅರ್ಧ